# ಕರ್ನಾಟಕ ವಿಧಾನಪರಿಷತ್ತು

<table>
<tr><td>ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ</td><td>2306</td></tr>
<tr><td>ಸದಸ್ಯರ ಹೆಸರು</td><td>ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು)</td></tr>
<tr><td>ಉತ್ತರಿಸಬೇಕಾದ ದಿನಾಂಕ</td><td>26.03.2026</td></tr>
<tr><td>ಉತ್ತರಿಸುವ ಸಚಿವರು</td><td>ಮಾನ್ಯ ಮುಖ್ಯಮಂತ್ರಿಯವರು</td></tr>
<tr><th>ಪ್ರಶ್ನೆ</th><th>ಉತ್ತರ</th></tr>
<tr><td>ಜಲಸಂಪನ್ಮೂಲ. ಲೋಕೋಪಯೋಗಿ, ಸಣ್ಣ ನೀರಾವರಿ, ನಗರಾಭಿವೃದ್ಧಿ ಮತ್ತು ಇತರ ಇಲಾಖೆಗಳಲ್ಲಿ ಟೆಂಡರ್ ಪಡೆದು ಕಾಮಗಾರಿಗಳನ್ನು ನಿರ್ವಹಿಸಿದ ಗುತ್ತಿಗೆದಾರರಿಗೆ ಸರ್ಕಾರ ಪಾವತಿಸಲು ಬಾಕಿ ಇರುವ ಬಿಲ್‌ಗಳ ಮೊತ್ತ ಎಷ್ಟು: (ಇಲಾಖಾವಾರು ಸಂಪೂರ್ಣ ವಿವರ ನೀಡುವುದು)</td><td>ಸರ್ಕಾರದ ವಿವಿಧ ಇಲಾಖೆಗಳಡಿ ಪಾವತಿಸಲು ಬಾಕಿ ಇರುವ ಬಿಲ್ಲುಗಳ ಮೊತ್ತವು ಈ ಕೆಳಕಂಡಂತಿವೆ<br>(ರೂ.ಕೋಟಿಗಳಲ್ಲಿ)
<table>
<tr><th>ಕ್ರಂ. ಸಂ</th><th>ಇಲಾಖೆ</th><th>ಮೊತ್ತ</th></tr>
<tr><td>1</td><td>ಲೋಕೋಪಯೋಗಿ</td><td>10421</td></tr>
<tr><td>2</td><td>ಜಲ ಸಂಪನ್ಮೂಲ</td><td>18772</td></tr>
<tr><td>3</td><td>ಸಣ್ಣ ನೀರಾವರಿ</td><td>3660</td></tr>
<tr><td>4</td><td>ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್</td><td>1653</td></tr>
<tr><td>5</td><td>ನಗರಾಭಿವೃದ್ಧಿ</td><td>4690</td></tr>
<tr><td>6</td><td>ಆರೋಗ್ಯ ಮತ್ತು ಕುಟುಂಬ ಕಲ್ಯಾಣ</td><td>100</td></tr>
</table></td></tr>
<tr><td>ಕಳೆದ 2 ವರ್ಷಗಳಿಂದ ಪಾವತಿಸಿರುವ ಬಿಲ್ ಗಳ ಮೊತ್ತ ಎಷ್ಟು: ರೂ.5.00 ಕೋಟಿಗಿಂತ ಹೆಚ್ಚು ಬಿಲ್ ಪಾವತಿಸಿರುವ ಗುತ್ತಿಗೆದಾರರ ಸಂಖ್ಯೆಯೆಷ್ಟು ಗುತ್ತಿಗೆದಾರರು ನಿರ್ವಹಿಸಿರುವ ಕಾಮಗಾರಿ ಸಹಿತ ಇಲಾಖಾವಾರು ವಿವರ ಒದಗಿಸುವುದು;</td><td>ಕಳೆದ 2 ವರ್ಷಗಳಲ್ಲಿ ಒಟ್ಟಾರೆ ರೂ.1,14,882 ಕೋಟಿ ಮೊತ್ತವನ್ನು ಬಂಡವಾಳ ಲೆಕ್ಕ ಶೀರ್ಷಿಕೆಯಡಿ ವೆಚ್ಚ ಭರಿಸಲಾಗಿದೆ. ಕಾಮಗಾರಿಗಳ ಪಾವತಿಗೆ ಸಂಬಂಧಿಸಿದಂತೆ, ಸರ್ಕಾರದ ಲೆಕ್ಕಪತ್ರ ಪದ್ಧತಿಯಲ್ಲಿ ನಿಗದಿಪಡಿಸಿದಂತೆ ಕಾಮಗರಿಗಳ ಬಿಲ್ಲನ್ನು ಪಾವತಿಸಲು ಬಂಡವಾಳ ಲೆಕ್ಕ ಶೀರ್ಷಿಕೆವಾರು ವಿವಿಧ ಇಲಾಖೆಗಳಿಗೆ ಅನುದಾನವನ್ನು ಒದಗಿಸಲಾಗುತ್ತದೆ. ಹೀಗೆ ಒದಗಿಸಲಾದ ಅನುದಾನವನ್ನು ಆಯಾ ಅನುಷ್ಠಾನ ಇಲಾಖೆಗಳು ಲೆಕ್ಕ ಶೀರ್ಷಿಕೆಯಡಿವಾರೇ ವೆಚ್ಚವನ್ನು ಭರಿಸುತ್ತವೆ. ಸರ್ಕಾರದ ಲೆಕ್ಕಪತ್ರ ವ್ಯವಸ್ಥೆಯು ಲೆಕ್ಕ ಶೀರ್ಷಿಕ ಆಧಾರಿತವಾಗಿರುವುದರಿಂದ, ಗುತ್ತಿಗೆದಾರುವಾರು ಹಾಗೂ ಕಾಮಗಾರಿವಾರು ಪಾವತಿ ವಿವರಗಳನ್ನು ಒಳಗೊಂಡ ಕೇಂದ್ರೀಕೃತ ಮಾಹಿತಿಯು ಆರ್ಥಿಕ ಇಲಾಖೆಯಲ್ಲಿ ನಿರ್ವಹಿಸಲಾಗುತ್ತಿರುವುದಿಲ್ಲ.</td></tr>
<tr><td>ಬಾಕಿ ಇರುವ ಬಿಲ್‌ಗಳ ಮೊತ್ತ ಪಾವತಿಸದ ಕಾರಣ ಗುತ್ತಿಗೆದಾರರು ಸರ್ಕಾರಕ್ಕೆ ಅಂತಿಮ ಗಡುವು ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು: ಗುತ್ತಿಗೆದಾರರಿಗೆ ಬಾಕಿ ಇರುವ ಬಿಲ್ ಪಾವತಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ: ಇದಕ್ಕಾಗಿ ಅಗತ್ಯ ಅನುದಾನವನ್ನು ಹೊಂದಿಸಲಾಗಿದೆಯೇ? (ಸಂಪೂರ್ಣ ವಿವರ ನೀಡುವುದು)</td><td>ಕಾಲಕಾಲಕ್ಕೆ ಲಭ್ಯವಾಗುವ ಆರ್ಥಿಕ ಸಂಪನ್ಮೂಲಗಳು, ಸರ್ಕಾರದ ಮೇಲಿರುವ ಹಣಕಾಸು ಭಾದ್ಯತೆಗಳು ಪರಿಗಣಿಸಿ ಬಾಕಿ ಬಿಲ್ಲುಗಳನ್ನು ತೀರುವಳಿ ಮಾಡಲು ಕ್ರಮವಹಿಸಲಾಗಿದೆ.</td></tr>
</table>

**ಕಡತ ಸಂಖ್ಯೆ:ಎಫ್‌ಡಿ 97 ಎಫ್‌ಸಿ-2/2026**

(ಸಿದ್ದರಾಮಯ್ಯ)
ಮುಖ್ಯಮಂತ್ರಿ